**ಕವಿತೆ**



## ಕಾತ್ಯಾಯಿನಿ ಕುಂಜಿಬೆಟ್ಟು

ಕಲೆ: ಪ್ರಭಾಕರ ಹೆಗಡೆ



# ನಕ್ಷತ್ರ

ಕರ್ಗ್ಗಾನ ಕತ್ತಲು
ಅಗಣಿತ ಕಣ್ಣುಗಳಿಂದ
ನನ್ನನ್ನೇ ನೋಡುತ್ತಿದೆ
ಎರಡೇ ಎರಡು ನಕ್ಷತ್ರಗಳನ್ನು
ಕಂಗಳಲ್ಲಿ ಹೀರಿ
ಕಣ್ಣು ಮುಚ್ಚಿದೆ
ಒಳಗಿನ ಕತ್ತಲಿಗೆ
ಹಚ್ಚಿಟ್ಟ ಬೆಳಕಾದವು ಅವು.

ಆ ಬೆಳಕಲ್ಲಿ

ಮನದ ಭಿತ್ತಿಯ ತುಂಬ
ಬಳ್ಳಿಗಳು ಹೂವುಗಳು
ಉಯ್ಯಾಲೆಯಾಡಿದವು
ಜೀಕಿದವು ನೆರಳುಗಳು
ಈ ತುದಿಯಿಂದ ಆ ತುದಿಗೆ
ಮತ್ತೆ ಆ ತುದಿಯಿಂದ ಈ ತುದಿಗೆ

ಕನಸುಗಳು ಕಣ್ಣ ಎವೆಗಳನು

ಚಿಗುರು ಬೆರಳುಗಳಿಂದ ತೆರೆದು
ಇಣುಕಿದವು...
ಮೋಡಗಳು ತೇಲುತಿದ್ದವು
ಹಾಡುಗಳ ಗುಣುಗಿ,
ಕೋಲ್ಮಿಂಚು ಬಳ್ಳಿಗಳಲ್ಲಿ
ಬೆಳಕು ಹೂವು

ಆಗಸದ ಕೊಳದಲ್ಲಿ
ತಾವರೆಯೊಂದು ಅರಳಿ
ನಕ್ಷತ್ರಗಳು ಪಾಚಿಗಟ್ಟಿದ ಬಂಡೆಗಳಲ್ಲಿ
ಕಾಲುಜಾರಿ ಮುಳುಗಿದವು

ಮನಸ ನಕ್ಷತ್ರಗಳು
ಕನಸ ತೊಟ್ಟುಗಳ
ಬಿಡಿಸಿಕೊಂಡು
ಹಾರಿದವು ರೆಕ್ಕೆ ಬಿಚ್ಚಿ
ಕೊಕ್ಕ ಚಾಚಿ
ಆಗಸದ ಕೊಳದ ಪ್ರತಿಬಿಂಬವಾಗಿ...
ಮತ್ತೆ ಪುನರಾವರ್ತನೆ ಚಕ್ರ